**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ</u>**

**<u>ಚನ್ನರಾಯಪಟ್ಟಣ</u>**

**<u>ಸಿಸಿ ಸಂಖ್ಯೆ 399/2022</u>** **CW-5 PW-3**

**<u>ಸಾಕ್ಷಿಯನ್ನು ದಿಃ 07.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಹೆಸರುಃ ಅಭಿಲಾಶ್

ತಂದೆಯ ಹೆಸರುಃ ಕೃಷ್ಣಯ್ಯ

ವಯಸ್ಸುಃ 40

ವೃತ್ತಿಃ ಅಬಕಾರಿ ಮುಖ್ಯ ಪೇದೆ

ವಾಸ ಸ್ಥಳಃ ಚನ್ನರಾಯಪಟ್ಟಣ

**<u>ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನಾನು 2019 ರಿಂದ ಇಲ್ಲಿಯವರೆಗೂ ಚನ್ನರಾಯಪಟ್ಟಣದ ಅಬಕಾರಿ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 23.11.2021 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಮೈಸೂರು ರಸ್ತೆಯ ಗ್ರೀನ್ ಟೀ ಡಾಬಾ ಪಕ್ಕದಲ್ಲಿ ನಾನು, ಚಾಸಾ-1, ಚಾಸಾ-4 ರವರು ರಸ್ತೆ ಗಾವಲುನಲ್ಲಿದ್ದಾಗ ಮೈಸೂರ ಕಡೆಯಿಂದ ದ್ವಿ ಚಕ್ರ ವಾಹನ ಕೆಎ 13 ಇ ಆರ್ 9984 ನ್ನು ತಡೆದು ನಿಲ್ಲಿಸಿ ಸದರಿ ವಾಹನವನ್ನು ಶೋಧನೆ ಮಾಡಲು ಪಂಚರ ಅವಶ್ಯಕತೆ ಇದ್ದುದ್ದರಿಂದ ಚಾಸಾ-1 ರವರು ಚಾಸಾ-2 ಮತ್ತು 3 ರವರನ್ನು ಕರೆದು ವಿಷಯ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು, ಅವರು ಒಪ್ಪಿರುತ್ತಾರೆ. ಸ್ಥಳದಲ್ಲಿ ನೋಟೀಸನ್ನು ತಯಾರಿಸಿ ಜಾರಿ ಮಾಡಿ ನಂತರ ವಾಹನವನ್ನು ಶೋದನೆ ಮಾಡಿದಾಗ ಮನ್ಯಾ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ಸಾಕಷ್ಟು ಸಮಯಾವಕಾಶ ಇಲ್ಲದೇ ಇರುವ

ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ಆದಾರವನ್ನು ಚಾಸಾ-1 ರವರು ತಯಾರಿಸಿಕೊಂಡು, ಅದಕ್ಕೆ ಪಂಚರ ಸಹಿಯನ್ನು ಸಹಿ ಪಡೆದುಕೊಳ್ಳಲಾಯಿತು. ನಂತರ ನಾವು ಪರಸ್ಪರ ಅಂಗಶೋಧನೆ ಮಾಡಿಕೊಂಡು, ಸದರಿ ವಾಹನವನ್ನು ಪರಿಶೀಲಿಸಿದಾಗ ವಾಹನದ ಡಿಕ್ಕಿಯಲ್ಲಿ ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್ ಕಂಡುಬಂದಿದ್ದು ಅದನ್ನು ಪರಿಶೀಲಿಸಲಾಗಿ ಅರದಲ್ಲಿ ಒಣಗಿದ ಗಾಂಜಾ ಮಾದರಿಯ ಸೊಪ್ಪು ಇರುವುದು ಕಂಡುಬಂದಿರುತ್ತದೆ. ನಂತರ ವಾಹನ ಸವಾರರನ್ನು ಚಾಸಾ-1 ರವರು ವಿಚಾರಿಸಿದಾಗ ಅವರ ಹೆಸರು ಪುನೀತ್ ಹೋಳೆನರಸೀಪುರ ಎಂದು ಉತ್ತರಿಸಿದ್ದು ಸದರಿ ಸೊಪ್ಪು ಗಾಂಜಾ ಎಂದು ಒಪ್ಪಿರುತ್ತಾರೆ. ಸ್ದಳದಲ್ಲಿ ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು, ಅವನ ಬಳಿ ಇದ್ದ ಸೊಪ್ಪನ್ನು ನಮ್ಮ ಬಳಿ ಇದ್ದ ತೂಕದ ಯಂತ್ರದ ಸಹಾಯದಿಂದ ತೂಕ ಮಾಡಲಾಗಿ ಅದರ ತೂಕ 325 ಗ್ರಾಂ ಒಣ ಗಾಂಜಾ ಇರುವುದು ಕಂಡುಬಂದಿರುತ್ತದೆ. ನಂತರ ಸದರಿ ಗಾಂಜಾವನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ದಾರದಲ್ಲಿ ಕಟ್ಟಿ ಅರಗಿನಿಂದ ಇಲಾಖಾ ಸೀಲನ್ನು ಮಾಡಲಾಯಿತು. ನಂತರ ಸ್ಥಳದಲ್ಲಿ ಮಾದರಿ ಸೀಲು ಮತ್ತು ಮಾದರಿ ಚೀಟಿಯನ್ನು ತಯಾರಿಸಿ, ಮಾದರಿ ಚೀಟಿಯನ್ನು ಸದರಿ ಚೀಲಕ್ಕೆ ಅಂಟಿಸಲಾಯಿತು. ಸ್ದಳದಲ್ಲಿಯೇ ಚಾಸಾ-1 ರವರು ಮಹಜರ್ ಕ್ರಮವನ್ನು ಮದ್ಯಾಹ್ನ 2.45 ರಿಂದ 3.45 ರವರೆಗೆ ಮಹಜರ್ ಕ್ರಮ ಕೈಗೊಂಡಿರುತ್ತಾರೆ.

ಸಾಕ್ಷಿ ಸ್ದಳ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ನಂತರ ಮುದ್ದೆ ಮಾಲು, ವಾಹನ ಮತ್ತು ಆರೋಪಿಯೊಂದಿಗೆ ಠಾಣೆಗೆ ಹಾಜರಾಗಿ ಆರೋಪಿಯ ವಿರುದ್ಧ ಪ್ರ.ವ ವರದಿಯನ್ನು ತಯಾರಿಸಿರುತ್ತಾರೆ,

ದಿಃ 25.11.2021 ರಂದು ನಾನು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಮು ಮಾ -1 ನ್ನು ನೋಡಿ ಗುರುತಿಸಿರುತ್ತಾರೆ .

ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ವಾಹನದ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–4 ಮತ್ತು ನಿಪಿ–5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ</u>**

ನಮ್ಮ ಕೆಲಸದ ಅವಧಿ ಬೆಳಗ್ಗೆ 10.00 ರಿಂದ ರಾತ್ರಿ 8.00 ರ ವರೆಗೆ ಇರುತ್ತದೆ. ಆ ದಿನ ಠಾಣೆಯನ್ನು ಬಿಟ್ಟಿರುತ್ತೇನೆ ಎಂದು ನೆನಪಿಲ್ಲ. ಸ್ಥಳಕ್ಕೆ ಹೋದಾಗ ಮದ್ಯಾಹ್ನ 2.30 ರ ಸಮಯ ಆಗಿತ್ತು. ಠಾಣೆಗೂ ಸ್ಥಳಕ್ಕೂ ಸುಮಾರು 3 ಕಿ ಮೀ ಅಂತರವಿದೆ. ನಾವು ಠಾಣೆಯಿಂದ ನೇರವಾಗಿ ಸದರಿ ಸ್ಥಳಕ್ಕೆ ಹೋಗಿರುತ್ತೇವೆ. ನಾನು ಮೈಸೂರು ರಸ್ತೆಯ ಎಡಭಾಗಕ್ಕೆ ನಿಂತಿದ್ದೆ. ಆರೋಪಿಯ ವಾಹನಕ್ಕೂ ಮೊದಲು ಎಷ್ಟು ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ ಎಂದು ನೆನಪಿಲ್ಲ. ನಾವೆಲ್ಲರೂ ಸದರಿ ವಾಹನವನ್ನು ನಿಲ್ಲಿಸಿರುತ್ತೇವೆ. ಸದರಿ ವಾಹನ ಮದ್ಯಾಹ್ನ 2.00 ರಿಂದ 2.30 ರ ಸಮಯದಲ್ಲಿ ಬಂದಿರುತ್ತದೆ. ಚಾಸಾ–2 ಮತ್ತು ಚಾಸಾ–3 ರವರನ್ನು ಚಾಸಾ–1 ರವರೇ ಕರೆತಂದಿರುತ್ತಾರೆ. ನಾವು ಸ್ಥಳಕ್ಕೆ ಹೋಗಿಲ್ಲ ಮತ್ತು ವಾಹನವನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ

ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಿಲ್ಲ. ನಾನು ನಿಪಿ–2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಕರ್ತವ್ಯಕ್ಕೆ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಮೆಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ  ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**